ಶ್ರೀ ಅಬ್ದುಲ್ ನಜೀರ್ ಸಾಬ್.—ಎಲ್ಲಾ ಮಂಡಲ ಪಂಚಾಯಿತಿಗಳು, ಎಲ್ಲಾಗ ಜಿಲ್ಲಾ ಪರಿಷತ್ತುಗಳ ಕಟ್ಟಡಗಳು ಒಂದೇ ಮಾದರಿಯಲ್ಲಿ ಇರಬೇಕೆಂದು ನಮ್ಮ ಇಚ್ಛೆ ಕೂಡ ಆಗಿದೆ. ಪಾಶ್ಚಾತ್ಯ ವಾಸ್ತು ಶಿಲ್ಪಕಾರರಿಗೆ ಹೇಳಿದ್ದೇವೆ ಅತ್ಯಂತ ಸರಳವಾದ ನಮ್ಮ ಸಂಸ್ಕೃತಿಗೆ ಅನುಗುಣವಾದಂತಹ ಕಟ್ಟಡಗಳ ವಿನ್ಯಾಸಗಳನ್ನು ಕೊಡಿ ಮತ್ತು ಜನ ಶಕ್ತಿಯು ಪ್ರತೀಕವಾಗಿ ಇರಬೇಕು ಎಂದು ನಾವು ಅವರಿಗೆ ಹೇಳಿದ್ದೇವೆ. ಇದರಲ್ಲಿ ಅವರ ಸಲಹೆಯನ್ನು ಪಡೆದು ನಂತರ ಈ ಸದನದ ಹಾಗೂ ಸಾರ್ವಜನಿಕರ ಮುಂದೆ ಇಟ್ಟು ನಂತರ ಮಾಡುತ್ತೇವೆ.

ಶ್ರೀ ಎಂ. ಪಿ. ಪ್ರಕಾಶ್.—ಈ ರೀತಿ ವಿನ್ಯಾಸಗಳನ್ನು ತಯಾರು ಮಾಡುವಂತಹ ಸಂದರ್ಭದಲ್ಲಿ ಆಯಾ ಪ್ರದೇಶದ ಚಾರಿತ್ರಿಕ ಹಿನ್ನೆಲೆಯನ್ನು ಲಕ್ಷ್ಯದಲ್ಲಿಟ್ಟುಕೊಂಡು ಮಾಡಬೇಕು. ಉದಾಹರಣೆಗೆ ಹೇಳುವುದಾದರೆ ಬಿಜಾಪುರ ಜಿಲ್ಲೆಗೆ ತನ್ನದೇ ಆದಂತಹ ಒಂದು ವಿಶಿಷ್ಟತೆ ಇದೆ. ಮೊಗಲ್ ಶಾಹಿ ಬಹುಮನಿ ರಾಜ್ಯಗಳು ಅಲ್ಲಿ ಇತ್ತು. ಬೇಲೂರು,ಹಳೆಬೀಡು ಮುಂತಾದ ಕಡೆಗಳಲ್ಲಿ ಯಾವ ತರಹದ ವಾಸ್ತುಶಿಲ್ಪ ಇದೆ, ವಿಜಯನಗರದ ಅರಸರ ಕಾಲದಲ್ಲಿ ಯಾವ ವಾಸ್ತುಶಿಲ್ಪ ಮತ್ತು ಏನು ಕಲಾ ಸೌಂದರ್ಯವನ್ನು ಕಾಪಾಡಿಕೊಂಡು ಬಂದಿದ್ದೇವೆ, ಅಂತಹ ಮಾದರಿಗಳನ್ನು, ಸೌಂದರ್ಯಗಳನ್ನು ಗಮನದಲ್ಲಿಟ್ಟುಕೊಂಡು ಈ ಕಟ್ಟಡಗಳನ್ನು ನಿರ್ಮಾಣ ಮಾಡಿದರೆ ಒಳ್ಳೆಯದೆಂದು ನನ್ನ ಭಾವನೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಮಾನ್ಯ ಸದಸ್ಯರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ ಅದನ್ನು ಪರಿಶೀಲನೆ ಮಾಡುತ್ತೇನೆ.

ಜಿಲ್ಲಾ ಪರಿಷತ್‌ಗಳಿಗೆ ಗೊತ್ತುಪಡಿಸಿದ ಮೊಬಲಗು

೧೬೧ (೫೪೫ ಸಿ) ಯು. ಭೂಪತಿ (ಸಂಡೂರು).—ಮಾನ್ಯ ಗ್ರಾಮೀಣ ಅಭಿವೃದ್ಧಿ ಪಸತಿ ಮತ್ತು ಪಕ್ಷ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಜಿಲ್ಲಾ ಪರಿಷತ್‌ಗಳಿಗೆ ಒಟ್ಟು ೮೦೦ ಕೋಟಿ ರೂಪಾಯಿಗಳನ್ನು ಕೊಡಲಾಗುವುದೆಂದು ಸರ್ಕಾರ ಘೋಷಿಸಿರುವುದು ನಿಜವೇ ?

ಆ) ಜಿಲ್ಲಾ ಪರಿಷತ್‌ಗಳಿಗೆ ೮೦೦ ಕೋಟಿ ರೂಪಾಯಿ ಒದಗಿಸಲು ಯೋಜನಾ ಆಯೋಗದ ಅನುಮತಿ ಆಗತ್ಯವೇ ? ಹಾಗಿದ್ದಲ್ಲಿ ಯೋಜನಾ ಆಯೋಗದ ಅನುಮತಿ ದೊರೆತಿದೆಯೇ ?

ಇ) ೮೦೦ ಕೋಟಿ ರೂಪಾಯಿಗಳನ್ನು ಒದಗಿಸುವ ಮೂಲಗಳ ವಿವರಗಳನ್ನು ಕೊಡಲಾಗುವುದೇ ?

ಈ) ಈ ಪೈಕಿ ಬಳ್ಳಾರಿ ಜಿಲ್ಲಾ ಪರಿಷತ್‌ಗೆ ಎಷ್ಟು ಹಣ ಒದಗಿಸಲಾಗುವುದು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

(ಅ),(ಆ),(ಇ) ಮತ್ತು (ಈ) ಜಿಲ್ಲಾ ಪರಿಷತ್ತಿಗೆ ಒದಗಿಸಲಾಗುವ ಹಣವು ಯೋಜನೆ ಮತ್ತು ಕರ್ತವ್ಯಗಳನ್ನು ಆವುಗಳಿಗೆ ವರ್ಗಾಯಿಸುವುದರ ಬೇರೆಗೆ ಆಧಾರ ಪಟ್ಟಿದೆ. ಇದರ ಪ್ರಸ್ತಾವನೆಗಳು ಮುಂಬರುವ ವಿಧಾನಮಂಡಲದಲ್ಲಿನ ಆಯವ್ಯಯದಲ್ಲಿ ಪ್ರತಿಬಿಂಬಿಸಲಾಗುತ್ತದೆ.

ಶ್ರೀ ಯು. ಭೂಪತಿ.—ಹಿಂದೆ ಪತ್ರಿಕಾ ಹೇಳಿಕೆಗಳು ತಮ್ಮಿಂದ ಬಂದಿದೆ. ನಾನು ಬಹಳ ನಿರ್ದಿಷ್ಟವಾದಂತಹ ಪ್ರಶ್ನೆಯನ್ನು ಕೇಳಿದ್ದೇನೆ. ಜಿಲ್ಲಾ ಪರಿಷತ್‌ಗಳಿಗೆ ಒಟ್ಟು ೮೦೦ ಕೋಟಿ ರೂಪಾಯಿ ಕೊಡಲಾಗುವುದೆಂದು ಸರಕಾರ ಘೋಷಿಸಿರುವುದು ನಿಜವೇ ? ಅದಕ್ಕೆ ತಾವು ಉತ್ತರ ವನ್ನು ಕೊಟ್ಟಿಲ್ಲ, ಜಿಲ್ಲಾ ಪರಿಷತ್‌ಗಳಿಗೆ ೮೦೦ ಕೋಟಿ ರೂಪಾಯಿಗಳನ್ನು ಒದಗಿಸಲು ಯೋಜನಾ ಆಯೋಗದ ಅನುಮತಿ ಆಗತ್ಯವೇ ? ಹಾಗಿದ್ದಲ್ಲಿ ಯೋಜನಾ ಆಯೋಗದ ಅನುಮತಿ ದೊರೆತಿದೆಯೇ ಎಂದು ಕೇಳಿದ್ದೇನೆ, ಅದಕ್ಕೂ ಉತ್ತರವನ್ನು ಕೊಟ್ಟಿಲ್ಲ, ಕೇಂದ್ರ ಸಚಿವರೊಬ್ಬರು ಯೋಜನಾ ಆಯೋಗದ ಅನುಮತಿಯನ್ನು ಪಡೆಯಬೆ ಈ ಯೋಜನೆಯನ್ನು ಮಾಡಿದ್ದೀರಿ ಎಂದು ಟೀಕೆ ಮಾಡಿ ದ್ದಾರೆ ಇದಕ್ಕೆ ತಾವೇನು ಹೇಳುತ್ತೀರಿ.

ಶ್ರೀ ಅಬ್ದುಲ್ ನಜೀರ್ ಸಾಬ್.—ತಾವು ನನ್ನ ಹೇಳಿಕೆಯನ್ನು ಸರಿಯಾಗಿ ಓದಿದ್ದೀರೆಂದು ಭಾವಿಸುತ್ತೇನೆ. ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತಿಗಳಿಗೆ ಹೇಗೆ ಹಣ ಹೋಗುತ್ತದೆಂದರೆ ಯೋಜನೆಗೆ ಒದಗಿಸತಕ್ಕಂತಹ ಹಣದಲ್ಲಿ ಶೇಕಡ ೪೦ರಷ್ಟು ಯೋಜನಾ ರಹಿತಕ್ಕೆ ಶೇಕಡ ೬೦

ಕೋಟಿ ರೂಪಾಯಿಗಳು ಎಲ್ಲಾ ಸೇರಿ ಹೆಚ್ಚೂ ಕಡಿಮೆ ೯೦೦ ಕೋಟಿ ರೂಪಾಯಿಗಳು ವರ್ಗಾವಣೆ ಯಾಗುತ್ತದೆ ಎಂದು ಹೇಳಿಕೆಯನ್ನು ಕೊಟ್ಟಿದ್ದೇನೆ. ಈ ಯೋಜನೆಗೆ ಯೋಜನಾ ಆಯೋಗ ಮಂಜೂರಾತಿ ಕೊಡುವುದರಿಂದ ಮತ್ತೆ ಯೋಜನಾ ಆಯೋಗದ ಅನುಮತಿ ಬೇಕಾಗಿಲ್ಲ. ಮುಂದೆ ಬರತಕ್ಕಂತಹ ಬಜೆಟ್ಟಿನಲ್ಲಿ ಯಾವ ಯಾವ ಬಾಬಿನ ಹಣವನ್ನು ಯಾವ ಯಾವ ಯೋಜನೆಗೆ ಒದಗಿಸುತ್ತೇವೆ ಮತ್ತು ಯಾವ ಯಾವ ಜಿಲ್ಲಾಪರಿಷತ್ತಿಗೆ ಎಷ್ಟೆಷ್ಟು ಹಣವನ್ನು ಒದಗಿಸುತ್ತೇವೆ ಎಂಬ ಬಗ್ಗೆ ಮಾಹಿತಿ ಸಿಗುತ್ತದೆ.

ಶ್ರೀ ಪಿ. ರತ್ನಾಕರ್.—ಮಾನ್ಯ ಅಧ್ಯಕ್ಷರೇ, ನನಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು.—ನಾನು ಅವಕಾಶ ಕೊಡುವುದಿಲ್ಲ. ತಾವು ಕುಳಿತುಕೊಳ್ಳಿ.

ಶ್ರೀ ಯು. ಭೂಪತಿ.—ಈ ರಾಜ್ಯದಿಂದ ಯೋಜನೆ ಮತ್ತು ಯೋಜನೇತರ ಬಾಬತ್ತಿನಲ್ಲಿ ಜಿಲ್ಲಾ ಪರಿಷತ್ತುಗಳಿಗೆ ಖರ್ಚು ಮಾಡತಕ್ಕಂಥ ಹಣ ಏನು ಇದೆ, ಇದಕ್ಕೆ ಸಂಪನ್ಮೂಲಗಳ ವಿಲ್ಲಿಂದ, ಯಾವ ರೀತಿ ಬರುತ್ತದೆ ಅವರ ಬಗ್ಗೆ ಸ್ವಲ್ಪ ವಿವರಣೆ ಬೇಕು.

ಶ್ರೀ ಅಬ್ದುಲ್ ನಜೀರ್ ಸಾಬ್.—ರಾಜ್ಯದ ಯೋಜನೆಗಳಿಗೆ ಯೋಜನಾರಹಿತ ವೆಚ್ಚಗಳಿಗೆ ಹಣ ಹೋಗುವುದು ರಾಜ್ಯದ ಬೊಕ್ಕಸದಿಂದ. ಯಾವ ಯಾವ ಸಂಪನ್ಮೂಲಗಳಿಂದ ಹಣ ಕ್ರೋಢೀಕರಣವಾಗುತ್ತದೆಯೋ, ಆ ರೀತಿಯಲ್ಲಿ ಕ್ರೋಢೀಕರಣವಾಗತಕ್ಕಂಥ ಹಣ ರಾಜ್ಯದ ಬೊಕ್ಕಸದ ಹಣ. ಈ ರಾಜ್ಯದ ಬೊಕ್ಕಸದಿಂದ ಆಯಾಯ ಯೋಜನೆಗಳಿಗೆ ಹಣ ವರ್ಗಾವಣೆ ಆಗುತ್ತದೆ. ಆಹಾರ ವಿತರಣೆಯು ಕಾರ್ಯ, ಇದಕ್ಕೆ ಸಾಕಷ್ಟು ಹಣ ಇದೆ. ಸಾಕಷ್ಟು ಯೋಜನೆ ತಯಾರಾಗಿದೆ. ಸರಕಾರಿ ಮಟ್ಟದಲ್ಲಿ, ಅವರ ಅಧಿಕಾರದಲ್ಲಿ ಇದೆ. ನಮ್ಮ ಶಾಸನದ ಪ್ರಕಾರ ಹಣ ವಿತರಣೆಯು ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿ ಸಿಬ್ಬಂದಿ ಅವರಿಗೆ ಇಷ್ಟಿರತಕ್ಕಂಥ ಹಣ ವರ್ಗಾವಣೆ ಆಗುತ್ತದೆ. ಈ ದೃಷ್ಟಿಯಿಂದ ಹಣ ಹೋಗುತ್ತದೆ ಏಂದು ಹೇಳಿದ್ದೇನೆ.

ಶ್ರೀ ಯು. ಭೂಪತಿ.—ಇದರಲ್ಲಿ ಏನಾಗಿದೆ ಎಂದರೆ ೯೦೦ ಕೋಟಿ ರೂಪಾಯಿಗಳನ್ನು ಜಿಲ್ಲಾ ಪರಿಷತ್ತು ಮಂಡಲ ಪಂಚಾಯಿತಿಗಳಿಗೆ ಕೊಡಲಾಗಿದೆ ಎಂದು ಹೇಳಿಕೆ ಬಂದಿರುವುದರಿಂದ ಜನಗಳ ತಲೆಯಲ್ಲಿ ಏನು ಭಾವನೆ ಬಂದಿದೆ ಎಂದರೆ ಸರ್ಕಾರದಿಂದ ನಮ್ಮ ಜಿಲ್ಲಾ ಪರಿಷತ್ತಿಗೆ ಮತ್ತು ಮಂಡಲ ಪಂಚಾಯಿತಿಗೆ ಹಣ ಬರುತ್ತದೆ ಎನ್ನುವ ಭಾವನೆ ಬಂದುಬಿಟ್ಟಿದೆ. ಈ ಕಾರಣದಿಂದ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಆದ್ದರಿಂದ ಇದರ ಬಗ್ಗೆ ವಿವರಣೆ ಬೇಕು ಎಂದು ನಾನು ಕೇಳಿದ್ದು ದು.

ಶ್ರೀ ಅಬ್ದುಲ್ ನಜೀರ್ ಸಾಬ್.—ಮಾನ್ಯ ಸದಸ್ಯರ ಮಾನಸ್ಸಿನಲ್ಲಿ ಗೊಂದಲ ಇದೆ. ಸರ್ಕಾರ ನೇರವಾಗಿ ಹೋಗುವುದು ಎಂದರೆ ಹೇಗೆ ? ನಜೀರ್‌ಸಾಬ್‌ರವರು ತಲೆಯ ಮೇಲೆ ದುಡ್ಡನ್ನು ತೆಗೆದುಕೊಂಡು ಬಳ್ಳಾರಿ ಪಂಚಾಯಿತಿಗೆ ಹೋಗಿ ಕೊಡುವುದು ಇಲ್ಲ. ಶಾಸನಬದ್ಧವಾಗಿ ಇಷ್ಟೊತ್ತು ಖರ್ಚು ಮಾಡುತ್ತಿದ್ದೇವೆ. ಟ್ರಜರಿಯಲ್ಲಿ ಹಣ ಇದೆ, ಖರ್ಚು ಮಾಡುತ್ತಿದ್ದೇವೆ. ಈ ಯೋಜನೆಗೆ ಹಣ ಖರ್ಚು ಮಾಡುವ ಅಧಿಕಾರ ಮಾತ್ರ ವರ್ಗಾವಣೆ ಆಗುತ್ತದೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ :—ಮತ್ತೆ ಗೈರುಹಾಜರಿ.

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ವಿ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸುವ ಉತ್ತರಗಳ ಪಟ್ಟಿಯನ್ನು ಸಭೆಯ ಮುಂದೆ ಇಡುತ್ತೇನೆ.

ಅಧ್ಯಕ್ಷರು.—ಉತ್ತರಗಳ ಪಟ್ಟಿಯನ್ನು ಸಭೆಯ ಮುಂದೆ ಇಡಲಾಯಿತು.

ಬೆಂಗಳೂರಿನ ನಗರಪಾಲಿಕೆಯವರು ಆಸ್ತಿ ತೆರಿಗೆಯನ್ನು ಪುನರ್‌ವಿಮರ್ಶಿಸುವ ಬಗ್ಗೆ

೧೨೪ (೪೯೩) ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಬೆಂಗಳೂರಿನ ನಗರಪಾಲಿಕೆಯವರು ಆಸ್ತಿ ತೆರಿಗೆಯನ್ನು ಪುನರ್ ವಿಮರ್ಶಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?